<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C 1057/2025
CW-14 PW-4

ಹೆಸರು : ತಿಮ್ಮಯ್ಯ

ತಂದೆಯ ಹೆಸರು : ಬಾಳಯ್ಯ

ವಯಸ್ಸು : 33 ವರ್ಷ

ಉದ್ಯೋಗ : ಪಿ.ಎಸ್.ಐ. ಕಾಳಗಿ.

ವಾಸ ಸ್ಥಳ : ಕಾಳಗಿ.

---

<u>ಪ್ರಮಾಣವಚನ ಭೋಧಿಸಲಾಯಿತು. ದಿಃ 17.03.2026</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ನಾನು 2024 ರಿಂದ ಇಲ್ಲಿಯವರೆಗೆ ಕಾಳಗಿ ಪೊಲಿಸ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ: 20-01-2025ರಂದು ಮಧ್ಯಾಹ್ನ 1-00 ಗಂಟೆಗೆ ಚಾಸಾ-1ರವರು ಠಾಣೆಗೆ ಬಂದು ದೂರು ನೀಡಿದ ಮೇರೆಗೆ ಪ್ರ-ವರ್ತಮಾನ ವರದಿಯನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1ರವರು ಸ್ಥಳ ತೋರಿಸಿದ ಜಾಗದಲ್ಲಿ ಗುನ್ನೆ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಅದೇ ದಿನ ಚಾಸಾ-2, 6 ಮತ್ತು 7ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ-12ರವರು ಘಟನಾ ಸ್ಥಳದ ಸಿ.ಸಿ.ಟಿ.ವ್ಹಿ. ಫುಟೇಜ್ ನ್ನು ಪೆನಡ್ರೈವ ಅಲ್ಲಿ ಹಾಕಿ ನನಗೆ ಹಾಜರುಪಡಿಸಿದ್ದು, ನಾನು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿನಾಂಕ: 12-06-2025ರಂದು ನಾನು ಚಾಸಾ-8 ಮತ್ತು 9ರವರು ಕೊಡದೂರ ಬಳಿ ಆರೋಪಿತನ ಪತ್ತೆ ಕುರಿತು ಹೋದಾಗ 1ನೇ ಆರೋಪಿತನು ಅಲ್ಲಿ ನಮಗೆ ಸಿಕ್ಕಿದ್ದು, ಆತನ ಸಂಶಯಾಸ್ಪದ ನಡುವಳಿಕೆಯ ಕಾರಣ ಆತನನ್ನು ಹಿಡಿದು ಠಾಣೆಗೆ ಕರೆದುಕೊಂಡು ಬಂದಿರುತ್ತೇನೆ. ಆಗ ಆರೋಪಿತ ತನ್ನ ಸ್ವ-ಖುಷಿ ಹೇಳಿಕೆಯನ್ನು ನೀಡಿದ್ದು, ನಾನು ಅದನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಅದೇ ದಿನ 1ನೇ ಆರೋಪಿತ ಘಟನಾ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿದ ಕಾರಣ, ನಾವು ಆತ ತೋರಿಸಿದ ಘಟನಾ ಸ್ಥಳಕ್ಕೆ

ಹೋಗಿದ್ದು, ನಾನು ಅಲ್ಲಿಯೂ ಸಹ ಚಾಸಾ-4 ಮತ್ತು ಚಾಸಾ-5ರವರ ಸಮಕ್ಷಮ ಜಪ್ತು ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನಾಮೆ ಸಮಯದಲ್ಲಿ ಭಾವಚಿತ್ರಗಳನ್ನು ಸಹ ತೆಗೆಸಿರುತ್ತೇನೆ. ಅದೇ ದಿನ 1ನೇ ಆರೋಪಿತನಿಂದ ಒಂದು ಕಪ್ಪು ಬಣ್ಣದ ಹಿರೋ ಹೊಂಡಾ ಮೋಟಾರ ಸೈಕಲನ್ನು ಚಾಸಾ-4 ಮತ್ತು 5ರವರ ಸಮಕ್ಷಮ ಜಪ್ತುಪಡಿಸಿಕೊಂಡಿರುತ್ತೇನೆ. ಆ ಸಮಯದಲ್ಲೂ ಸಹ ಭಾವಚಿತ್ರಗಳನ್ನು ತೆಗೆಸಿರುತ್ತೇನೆ. ನಂತರ 1ನೇ ಆರೋಪಿತನ ಸವ-ಖುಷಿ ಹೇಳಿಕೆ ಪ್ರಕಾರ 1ನೇ ಆರೋಪಿತನ ಮನೆಗೆ ಹೋಗಿ ಚಾಸಾ-4 ಮತ್ತು 5ರವರ ಸಮಕ್ಷಮ ರೂ.15,000/- ಹಣವನ್ನು ಪಂಚನಾಮೆ ಅಡಿಯಲ್ಲಿ ಜಪ್ತುಪಡಿಸಿಕೊಂಡು ಭಾವಚಿತ್ರಗಳನ್ನು ತೆಗೆಸಿರುತ್ತೇನೆ. ಅದೇ ದಿನ ಚಾಸಾ-1ರವರ ಹೇಳಿಕೆಯನ್ನು ಸಹ ಪಡೆದಿರುತ್ತೇನೆ. ಅದೇ ದಿನ ಚಾಸಾ-8 ಮತ್ತು 9ರವರ ವರದಿಗಳನ್ನು ಸಹ ಪಡೆದಿರುತ್ತೇನೆ. ಅದೇ ದಿನ ಜಪ್ತುಪಡಿಸಿಕೊಂಡ ಮುದ್ದೆಮಾಲುಗಳನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿನಾಂಕ: 13-06-2025ರಂದು ಚಾಸಾ-2, 6 ಮತ್ತು 7ರವರ ಪುರವಣಿ ಹೇಳಿಕೆಗಳನ್ನು ಸಹ ಪಡೆದಿರುತ್ತೇನೆ. ಅದೇ ದಿನ ಚಾಸಾ-12ರವರಿಂದ ಸಾಕ್ಷ್ಯತ್ವ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ.

ದಿನಾಂಕ: 08-09-2025ರಂದು ಚಾಸಾ-10 ಮತ್ತು ಚಾಸಾ-11ರವರು 2ನೇ ಆರೋಪಿಯನ್ನು ನನ್ನ ಸಮಕ್ಷಮ ಹಾಜರುಪಡಿಸಿರುತ್ತಾರೆ. 2ನೆ ಆರೋಪಿತನ ಸ್ವ-ಖುಷಿ ಹೇಳಿಕೆಯನ್ನು ಸಹ ಪಡೆದಿರುತ್ತೆನೆ. ನಂತರ ಅದೇ ದಿನ ಚಾಸಾ-10 ಮತ್ತು 11 ರವರ ವರದಿಗಳನ್ನು ಸಹ ಪಡೆದಿರುತ್ತೇನೆ.

ದಿನಾಂಕ: 18-09-2025ರಂದುನ ಜಪ್ತುಪಡಿಸಿಕೊಂಡ ದ್ವಿ-ಚಕ್ರವಾಹನದ ಬಿ. ಎಕ್ಸಟ್ರ್ಯಾಕ್ಟನ್ನು ಚಾಸಾ-13ರರಿಂದ ಪಡೆದಿರುತ್ತೇನೆ. ಅದೇ ದಿನ ವೀರಭದ್ರ ದೇವಸ್ಥಾನದ ಜಾಗದ ಪಹಣಿ ಪತ್ರಿಕೆಯನ್ನು ಕೊಡುವಂತೆ ಪಿ.ಡಿ.ಓ. ಕಂದಗೂಳ ಇವರಿಗೆ ಕೋರಿ ಪತ್ರ ಬರೆದು ಅವರಿಂದ ದಾಖಲೆಗಳನ್ನು ಸ್ವೀಕರಿಸಿರುತ್ತೇನೆ. ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಧಾರಗಳು ಇದ್ದ ಕಾರಣ, ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ನಾನು ವಶಕ್ಕೆ ಪಡೆದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಸಮಕ್ಷಮ ವಿ.ಸಿ. ಮೂಲಕ ಹಾಜರುಪಡಿಸಿದ ಆರೋಪಿತರೇ ನಾನು ಈ ಪ್ರಕರಣದಲ್ಲಿ ವಶಕ್ಕೆ ಪಡೆದ ಆರೋಪಿತರಾಗಿರುತ್ತಾರೆ.

ನಾನು ಸ್ವೀಕರಿಸಿದ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ದೂರನ್ನು ಈಗಾಗಲೇ ನಿಶಾನೆ ಪಿ-1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-1(ಬಿ) ಎಂದು ಗುರುತಿಸಲಾಯಿತು. ನಾನು ಜರುಗಿಸಿದ ಸ್ಥಳ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಸ್ಥಳ ಪಂಚನಾಮೆಯನ್ನು ನಿಶಾನೆ ಪಿ7 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-7(ಎ) ಎಂದು ಗುರುತಿಸಲಾಯಿತು. ನಾನು ಜರುಗಿಸಿದ ಜಪ್ತು ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಜಪ್ತು ಪಂಚನಾಮೆಯನ್ನು ನಿಶಾನೆ ಪಿ-8 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಶಾನೆ ಪಿ-8(ಎ) ಎಂದು ಗುರುತಿಸಲಾಯಿತು. ನಾನು ಸ್ವೀಕರಿಸಿದ ಚಾಸಾ-13ರವರ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ವರದಿಯನ್ನು ನಿಶಾನೆ ಪಿ-9 ಎಂದು, ಸಾಕ್ಷಿ ಸಹಿಯನ್ನು ನಿಶಾನೆ ಪಿ-(ಎ) ಎಂದು, ಕಂದಗೂಳ ಗ್ರಾಮ ಪಂಚಾಯತಿಗೆ ನೀಡಿದ ಕೋರಿಕೆ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಕೋರಿಕೆ ಪತ್ರವನ್ನು ನಿಶಾನೆ ಪಿ-10 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-10(ಎ) ಎಂದು, ನಾನು ಸ್ವೀಕರಿಸಿದ ಕಂದಗೂಲ ಗ್ರಾಮ ಪಂಚಾಯತಿಯ ನಮೂನೆ -11 ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ನಮೂನೆ-11 ನ್ನು ನಿಶಾನೆ ಪಿ-11 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-11(ಎ) ಎಂದು, ನಾನು ದಾಖಲಿಸಿದ ಪ್ರವರ್ತಮಾನ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಪ್ರವರ್ತಮಾನ ವರದಿಯನ್ನು ನಿಶಾನೆ ಪಿ-12 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-12(ಎ) ಎಂದು ಗುರುತಿಸಲಾಯಿತು. ಪಂಚನಾಮೆಗಳ ಸಮಯದಲ್ಲಿ ತೆಗೆದ ಭಾವಚಿತ್ರಗಳನ್ನು ನೋಡಿದರೆ ಗುರುತಿಸುತ್ತೇನೆ. ಸಲಕ್ಷಿ ಈಗ ನೋಡಿ ಗುರುತಿಸಿದ ಭಾವಚಿತ್ರಗಳನ್ನು ನಿಶಾನೆ ಪಿ-13 ರಿಂದ ಪಿ-17 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಜಿ.ಎ. ವಕೀಲರಿಂದ</u>

ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಪಂಚನಾಮೆಗಳನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ನೀವು ಹೇಳುವಂತೆ ಆರೋಪಿತರು ನಿಮ್ಮ ಬಳಿ ಯಾವುದೇ ಸ್ವ-ಖುಷಿ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ನೀವು ಆರೋಪಿತರ ಸ್ವ-ಖುಷಿ ಹೇಳಿಕೆಯಂತೆ ಯಾವುದೇ ವಸ್ತುಗಳನ್ನು ಅಥವಾ ಹಣವನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಗುನ್ಹೆ ಮಾಡಿಲ್ಲ ಮತ್ತು ನೀವು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ಯಾಂತ್ರಿಕವಾಗಿ ತನಿಖೆ

ಮಾಡಿ ಆರೋಪಿತರು ಗುನ್ನೆ ಮಾಡಿಲ್ಲ ಎಂದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,

ಚಿತ್ತಾಪೂರ.